UNIVERSITY LIBRARY
WEDNESDAY 16-07-2025
Agri Newspaper Clippings

ನ.13-16ರವರೆಗೆ ಕೃಷಿ ಮೇಳ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರತಿವರ್ಷ ನಡೆಸುವ ಕೃಷಿ ಮೇಳ ಈ ಬಾರಿ ನ.13ರಿಂದ ನಾಲ್ಕು ದಿನ ಜಿಕೆವಿಕೆಯಲ್ಲಿ ನಡೆಯಲಿದೆ. ಈ ಬಾರಿ 'ಸಮೃದ್ಧಿ ಕೃಷಿ - ವಿಕಸಿತ ಭಾರತ: ನೆಲ, ಜಲ, ಬೆಳೆ' ಘೋಷವಾಕ್ಯ ಅಡಿಯಲ್ಲಿ ಮೇಳ ಸಂಘಟಿಸಲಾಗುತ್ತಿದೆ. ಭವಿಷ್ಯದ ಕೃಷಿ ರಾಷ್ಟ್ರದ ಅಮೂಲ್ಯ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಹಾಗೂ ಜೀವ ವೈವಿಧ್ಯತೆ ಮೇಲೆ ಅವಲಂಬಿತವಾಗಿದೆ. ಇವುಗಳನ್ನು ವೈಜ್ಞಾನಿಕವಾಗಿ ಜವಾಬ್ದಾರಿಯುತವಾಗಿ ಬಳಸಿ, ಸಂರಕ್ಷಿಸುವ ಮೂಲಕ ಸುಸ್ಥಿರ ಕೃಷಿ ಮತ್ತು ಕೃಷಿಕರ ಆದಾಯವೃದ್ಧಿ ಈ ಮೇಳದ ಆಶಯವಾಗಿದೆ ಎಂದು ಕುಲಪತಿ ಡಾ. ಎಸ್.ವಿ. ಸುರೇಶ್ ತಿಳಿಸಿದ್ದಾರೆ. ಕೃಷಿ ಮೇಳವು ಕೃಷಿಕರ ಆದಾಯ ಮೂಲ ಹೊರತಾಗಿ ಹೊಸ ಗಳಿಕೆಯ ಹಾದಿ ಕಲ್ಪಿಸುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕರಿಗೆ ವ್ಯವಸಾಯ ಕ್ಷೇತ್ರದ ಬಗ್ಗೆ ಆಸಕ್ತಿ ಮೂಡಿಸಲು ಕೃಷಿ ಪ್ರವಾಸೋದ್ಯಮವನ್ನು ಉದ್ದಿಮೆಯಾಗಿ ಪರಿಚಯಿಸಬೇಕಾಗಿದೆ. ಇದಕ್ಕಾಗಿ ವಿಶೇಷ ಮಾದರಿಯನ್ನು ಮೇಳದಲ್ಲಿ ಪ್ರದರ್ಶಿಸಲಾಗುವುದು ಎಂದಿದ್ದಾರೆ

■ ಬೆಂ ಕೃಷಿ ವಿವಿಯಿಂದ ಆಯೋಜನೆ

Vijayavani pg 06

ನ.13 ರಿಂದ 16ರವರೆಗೆ ಕೃಷಿ ಮೇಳ

ಬೆಂಗಳೂರು: ಅರವತ್ತು ವರ್ಷಗಳ ಸಂಭ್ರಮಾಚರಣೆಯಲ್ಲಿರುವ ಬೆಂಗಳೂರು ಕೃಷಿ ವಿವಿಯು ಈ ಬಾರಿ ಕೃಷಿ ಮೇಳವನ್ನು ನವೆಂಬರ್ 13 ರಿಂದ 16ರ ವರೆಗೆ ವಿಭಿನ್ನವಾಗಿ ಆಯೋಜಿಸಲು ಸಜ್ಜಾಗುತ್ತಿದೆ. ಈ ಬಾರಿ ಕೃಷಿ ಮೇಳವನ್ನು 'ಸಮೃದ್ಧ ಕೃಷಿ –ವಿಕಸಿತ ಭಾರತ: ನೆಲ, ಜಲ, ಬೆಳೆ' ಶೀರ್ಷಿಕೆಯಡಿ ಆಚರಿಸಲು ಉದ್ದೇಶಿಸಲಾಗಿದೆ.

■ 'ಸಮೃದ್ಧ ಕೃಷಿ –ವಿಕಸಿತ ಭಾರತ: ನೆಲ, ಜಲ, ಬೆಳೆ' ಶೀರ್ಷಿಕೆಯಡಿ ಮೇಳಕ್ಕೆ ಸಿದ್ಧತೆ

ಭವಿಷ್ಯದ ಕೃಷಿ ರಾಷ್ಟ್ರದ ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಹಾಗೂ ಜೀವ ವೈವಿಧ್ಯತೆಗಳ ಮೇಲೆ ಅವಲಂಬಿತವಾಗಿದ್ದು, ಇವುಗಳನ್ನು ವೈಜ್ಞಾನಿಕವಾಗಿ, ಜವಾಬ್ದಾರಿಯುತವಾಗಿ ಬಳಸಿ, ಸಂರಕ್ಷಿಸುವ ಮೂಲಕ ಸುಸ್ಥಿರ ಕೃಷಿ ಹಾಗೂ ಕೃಷಿಕರ ಆದಾಯ ವೃದ್ಧಿಗೊಳಿಸುವುದು ಈ ಮೇಳದ ಆಶಯವಾಗಿದೆ. ಆ ಮೂಲಕ ವಿಕಸಿತ ಭಾರತದ ಪರಿಕಲ್ಪನೆಗೆ ಕೃಷಿ ಕ್ಷೇತ್ರದ ಕೊಡುಗೆಯನ್ನು ಪ್ರತಿಪಾದಿಸುವ ವಿಶೇಷ ವೇದಿಕೆಯನ್ನು ಈ ಮೇಳ ಕಲ್ಪಿಸಲಿದೆ.

ಸಾರ್ವಜನಿಕರಿಗೆ ಕೃಷಿ ಕ್ಷೇತ್ರದ ಕುರಿತು ಆಸಕ್ತಿ ಮೂಡಿಸಲು ಕೃಷಿ ಪ್ರವಾಸೋದ್ಯಮವನ್ನು ಒಂದು ಉದ್ದಿಮೆಯಾಗಿ ಪರಿಚಯಿಸುವ ಪ್ರಯತ್ನಕ್ಕೆ ಈ ಮೇಳ ಸಾಕ್ಷಿಯಾಗಲಿದೆ. ಈ ಉದ್ದೇಶಕ್ಕಾಗಿ ಕೃಷಿ ಪ್ರವಾಸೋದ್ಯಮದ ಆಕರ್ಷಕ ಮಾದರಿಯೊಂದನ್ನು ಕೃಷಿ ವಿವಿ ಕೃಷಿಕರಿಗೆ ಪರಿಚಯಿಸಲು ಸಜ್ಜಾಗುತ್ತಿದೆ. ಇವೆಲ್ಲವುಗಳ ಜತೆ ಎಂದಿನಂತೆ ಕೃಷಿ ಮೇಳದಲ್ಲಿ ಬೃಹತ್ ವಸ್ತು ಪ್ರದರ್ಶನ, ಬೆಳೆ ಪ್ರಾತ್ಯಕ್ಷಿಕೆಗಳು, ಚರ್ಚಾಗೋಷ್ಠಿಗಳು, ಸಲಹಾ ಸೇವೆ, ಸಾಧಕ ಕೃಷಿಕರಿಗೆ ಪ್ರಶಸ್ತಿ ಪ್ರದಾನ, ಗ್ರಾಮೀಣ ಕಲೆ, ಸಂಸ್ಕೃತಿ ಇತ್ಯಾದಿಗಳಿಗೆ ವೇದಿಕೆಯಾಗಲಿದೆ ಎಂದು ಬೆಂಗಳೂರು ಕೃಷಿ ವಿವಿ ಪ್ರಕಟಣೆಯಲ್ಲಿ ತಿಳಿಸಿದೆ.

V-karantaka pg 08

ಸ್ಮಾಲ್ ಹೈವ್ ಬೀಟಲ್ ಕೀಟದಿಂದ ಸಮಸ್ಯೆ

ಜೇನುಕೃಷಿಗೆ ಕೀಟ ಕಂಟಕ

ಕೃಷಿ ವಿಜ್ಞಾನಿಗಳ ಸಂತೋಧನೆಯಲ್ಲಿ ಮಹತ್ವದ ಅಂಶ ಬೆಳಕಿಗೆ





15-07-2025
Hosadiganta pg 01

ದೇವಿತಾ ಸಿ.ಎಸ್.

• **ಬೆಂಗಳೂರು:** ರಾಜ್ಯದಲ್ಲಿ ಜೇನು ಸಾಕಾಣಿಕೆಗೆ ಹೊಸದೊಂದು ಸವಾಲು ಎದುರಾಗಿದ್ದು, ಸ್ಮಾಲ್ ಹೈವ್ ಬೀಟಲ್ ಎಂಬ ಹೊಸ ಕೀಟವು ಜೇನುಕೃಷಿಗೆ ಬಹುದೊಡ್ಡ ಕಂಟಕವಾಗಲಿದೆ. ಕೃಷಿ ವಿಜ್ಞಾನಿಗಳ ಸಂಶೋಧನೆಯಲ್ಲಿ ಈ ಮಹತ್ವದ ಅಂಶ ಬೆಳಕಿಗೆ ಬಂದಿದೆ.

ರಾಜ್ಯದ ಮಲೆನಾಡಿನ 50 ಸಾವಿರಕ್ಕೂ ಹೆಚ್ಚು ಜೇನು ಕೃಷಿಕರು ಲಕ್ಷಾಂತರ ತುಡುವೆ ಜೇನು ಕುಟುಂಬಗಳ ನಿರ್ವಹಣೆ ಮಾಡಿ ವಾರ್ಷಿಕ 1200 ಟನ್‌ಗಳಷ್ಟು ಜೇನು ಉತ್ಪಾದನೆ ಮಾಡುತ್ತಿದ್ದಾರೆ. ಆದರೆ, ಥಾಯ್ ಸ್ಯಾಕ್ ಬ್ರೂಡ್ ವೈರಾಣು ರೋಗ ಹಾವಳಿಯಿಂದ ಈಗಾಗಲೇ ಸಾಕಷ್ಟು ಬಳಲಿರುವ ರಾಜ್ಯದ ಜೇನು ಸಾಕಾಣಿಕೆ ಉದ್ಯಮಕ್ಕೆ ಸ್ಮಾಲ್ ಹೈವ್ ಬೀಟಲ್ ಎಂಬ ಹೊಸ ಕೀಟ ವ್ಯಾಪಕವಾಗಿ ತೊಂದರೆ ನೀಡಲಿದೆ ಎಂದು ಬೆಂಗಳೂರು ಕೃಷಿ ವಿವಿಯ ಜೇನುಕೃಷಿ ವಿಜ್ಞಾನಿಗಳು ಮುನ್ಸೂಚನೆ ನೀಡಿದ್ದಾರೆ. ಇತ್ತೀಚೆಗೆ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಆಪಿಸ್ ಮೆಲ್ಲಿಫೆರಾ ಜಾತಿಯ ಜೇನು ಕುಟುಂಬಗಳಲ್ಲಿ ಸ್ಮಾಲ್ ಹೈವ್ ಬೀಟಲ್ ಕೀಟ ಕಂಡುಬಂದಿದ್ದು, ಇದರಿಂದಾಗಿ 20 ಸಾವಿರಕ್ಕೂ ಹೆಚ್ಚು ಜೇನು ಕುಟುಂಬಗಳು ನಾಶವಾದ ವರದಿಗಳಿವೆ. ಪುಟ ೭

ಜೇನುಕೃಷಿಗೆ ಕೀಟ ಕಂಟಕ

ಪುಟ ೧ ಇದರ ಮಾಹಿತಿ ತಿಳಿದ ಬೆಂಗಳೂರು ಕೃಷಿ ವಿವಿಯ ಜೇನು ಕೃಷಿ ವಿಜ್ಞಾನಿಗಳ ತಂಡವು ಒಂದು ವರ್ಷ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಸ್ಮಾಲ್ ಹೈವ್ ಬೀಟಲ್ ಕೀಟಗಳ ಕುರಿತು ಸಮೀಕ್ಷೆ ನಡೆಸಿದೆ.

ರೈತರು ಕೈಗೊಳ್ಳಬೇಕಾದ ಕ್ರಮಗಳೇನು?

ಜೇನುನೊಣಗಳ ಕುಟುಂಬಗಳಲ್ಲಿ ಸ್ಮಾಲ್ ಹೈವ್ ಬೀಟಲ್ ಬಾಧೆಯ ಕುರಿತು ಪರಿಶೀಲಿಸಿ ಕ್ವಾರಂಟೈನ್ ಕ್ರಮ ಜಾರಿಗೊಳಿಸಬೇಕು. ಜೇನುನೊಣಗಳನ್ನು ಮಾತ್ರ ಹೊಸ ಪೆಟ್ಟಿಗೆಗೆ ವರ್ಗಾವಣೆ ಮಾಡಿ ಖಾಲಿ ಏರಿ (ಕೋಂಬ್) ಗಳನ್ನು ಸುಟ್ಟು ಹಾಕಬೇಕು ಅಥವಾ ಕೀಟ ನಾಶಕ ಸಿಂಪಡಿಸಬೇಕು. ಹಕ್ಕದ ರಾಜ್ಯಗಳಿಂದ ಸೋಂಕಿತ ಜೇನು ನೊಣಗಳ ಕುಟುಂಬಗಳ(ವಿಶೇಷವಾಗಿ ಮೆಲ್ಲಿಫೆರಾ) ಏರಿದಿ ನಿಲ್ಲಿಸಬೇಕು. ಎಲ್ಲಾ ಸೋಂಕಿತ ಜೇನುಗೂಡುಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಬೇಕು. ಈ ಕ್ರಮಗಳ ಮೂಲಕ ಕೀಟಗಳ ಹರಡುವಿಕೆಯನ್ನು ನಿಯಂತ್ರಿಸಬಹುದು ಎಂದು ಜೇನು ಕೃಷಿ ವಿಜ್ಞಾನಿಗಳು ಸೂಚಿಸಿದ್ದಾರೆ.

ಸ್ಮಾಲ್ ಹೈವ್ ಬೀಟಲ್ ಕೀಟದ ಲಕ್ಷಣಗಳೇನು?

ಸ್ಮಾಲ್ ಹೈವ್ ಬೀಟಲ್ ಎಂಬ ಕೀಟವೂ ಸ್ಥಳೀಯವಾಗಿ ಸಹಾರ- ಆಫ್ರಿಕಾ ಖಂಡಕ್ಕೆ ಸೇರಿದೆ. ಸ್ಮಾಲ್ ಹೈವ್ ಬೀಟಲ್ ಕೀಟವು ಕಂದು ಮತ್ತು ಕಪ್ಪು ಬಣ್ಣದ ಜೀರುಂಡೆಯಾಗಿದೆ. ಈ ಕೀಟಕ್ಕೆ ಕನ್ನಡದಲ್ಲಿ ನಿರ್ದಿಷ್ಟವಾದ ಹೆಸರಿಲ್ಲದ ಕಾರಣ, ಇದನ್ನು ಜೇನು ಜೀರುಂಡೆ ಎಂದು ಕರೆಯಬಹುದಾಗಿದೆ. ಜೇನುಗೂಡುಗಳಲ್ಲಿನ ಪರಾಗ, ಜೇನುತುಪ್ಪ ಹಾಗೂ ಸತ್ತ ಜೇನು ನೊಣಗಳನ್ನು ತಿಂದು ಇದು ಬದುಕುತ್ತದೆ. ಮರಿಹುಳು ಹಂತದ ಏರಿಗಳಲ್ಲಿ ಜೇನುತುಪ್ಪ ಮತ್ತು ಪರಾಗವನ್ನು ನಿರಂತರವಾಗಿ ತಿನ್ನುವ ಮೂಲಕ ಜೇನುಗೂಡುಗಳಿಗೆ ಹೆಚ್ಚಿನ ಹಾನಿ ಉಂಟು ಮಾಡುತ್ತದೆ. ಸಾವಿರಾರು ಜೇನು ಕುಟುಂಬಗಳು ಬೀಟಲ್ ಕಾಟ ತಾಳಲಾಗದೆ ಗೂಡು ಬಿಟ್ಟು ಪಲಾಯನವಾಗುತ್ತವೆ. ಜೇನುಗೂಡಿನ ಏರಿಗಳಲ್ಲಿ ಮರಿ ಹುಳುಗಳು ಮಲಸರ್ಜನೆ ಮಾಡುವುದರಿಂದ ಜೇನುತುಪ್ಪದ ಬಣ್ಣ ಕಂದು ಬಣ್ಣಕ್ಕೆ ತಿರುಗುತ್ತದೆ ಮತ್ತು ಹುಳಿಯಾಗುವಿಕೆಗೆ ಕಾರಣವಾಗುತ್ತದೆ.

ಬೆಂಗಳೂರು, ಮೈಸೂರಿನಲ್ಲಿ ಈ ಕೀಟ ಪತ್ತೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜೇನುಕೃಷಿ ವಿಜ್ಞಾನಿಗಳ ತಂಡವು ಕಳೆದ ವರ್ಷ ಜೂನ್‌ನಿಂದ ಈ ವರ್ಷ ಜೂನ್‌ವರೆಗೆ ಕರ್ನಾಟಕದ 13 ಜಿಲ್ಲೆಗಳಲ್ಲಿ ಸ್ಮಾಲ್ ಹೈವ್ ಬೀಟಲ್ ಕೀಟಗಳ ಬಗ್ಗೆ ಸಮೀಕ್ಷೆ ನಡೆಸಿದೆ. ಅದರಲ್ಲಿ ಈ ಕೀಟ ಬಾಧೆಯು ಬೆಂಗಳೂರು ಮತ್ತು ಮೈಸೂರು ಎರಡು ಜಿಲ್ಲೆಗಳಲ್ಲಿ ಮಾತ್ರ ಕಂಡುಬಂದಿದೆ. ಮೈಸೂರು ಜಿಲ್ಲೆಯ 6 ಸ್ಥಳಗಳಲ್ಲಿ 480 ತುಡುವೆ ಜೇನು ಕುಟುಂಬಗಳನ್ನು ಪರೀಕ್ಷಿಸಿದಾಗ ಕೀಟಬಾಧೆಯ ಪ್ರಮಾಣ ಶೇ.58.33ರಷ್ಟಿದ್ದು, 280 ಜೇನು ಕುಟುಂಬಗಳು ಗೂಡು ಬಿಟ್ಟು ಪಲಾಯನವಾಗಿವೆ ಎಂಬ ಆಘಾತಕಾರಿ ಅಂಶ ಕಂಡುಬಂದಿದೆ.

ಜೇನುಗಳಿಗೆ ತೊಂದರೆಯಾಗದಂತೆ ಸ್ಮಾಲ್ ಹೈವ್ ಬೀಟಲ್ ಕೀಟಗಳನ್ನು ನಾಶಮಾಡುವುದು ಹಾಗೂ ಹರಡುವಿಕೆಯನ್ನು ತಡೆಗಟ್ಟಲು, ಜಿಕೆವಿಕೆಯ ವಿಜ್ಞಾನಿ ತಂಡದಿಂದ ಜೈವಿಕ ವಿಧಾನದಲ್ಲಿ ಸೂಕ್ತ ನಿರ್ವಹಣ ಕ್ರಮಗಳನ್ನು ಕಂಡುಹಿಡಿಯಲಾಗುತ್ತಿದೆ.

■ **ಡಾ.ಕೆ.ಟಿ.ವಿಜಯ್‌ಕುಮಾರ್, ಜೇನು ಕೃಷಿ ವಿಭಾಗದ ವಿಜ್ಞಾನಿ, ಜಿಕೆವಿಕೆ**

Coconut price surge fuels theft in Kerala village

Dec Hrd pg 06

ARJUN RAGHUNATH
THIRUVANANTHAPURAM, DHNS

As coconut prices skyrocket, a village in Kerala's Kozhikode district is witnessing a spurt in thefts.

Aggrieved by the situation, landowners and farmers have filed police complaints, installed CCTV cameras and formed an action committee to jointly resist the thefts.

Kuttyadi village on the outskirts of Kozhikode, which is known for its high-yielding coconut trees, is now facing law and order issues over the crop, with some action committee members reportedly attacked.



While the price of coconuts was around Rs 30 per kilogram until recently, it has now surged to Rs 80.

According to local police, five petitions related to coconut thefts involving up to 500 coconuts have been received.

"The accused are yet to be identified. The investigation is progressing," said an officer from the Thottilpalam police station near Kuttiyadi.

The action committee has urged local shopkeepers to remain alert against suspected thieves trying to sell coconuts. Autorickshaw and goods carrier operators in the region have also been advised to be vigilant against those transporting large quantities of coconuts.

Action Council convenor AP Ali said the thieves were targeting farmland where owners were not present. Some farmers who tried to resist theft attempts were attacked.

"We do not suspect the involvement of migrant workers. It appears to be some local people with questionable backgrounds who are involved in the thefts. Earlier, people used to take fallen coconuts. But now, coconuts are being stolen directly from the trees," he said.

Kavilumpara grama panchayat president George Ponnattil said that when coconut prices were low, many farm owners did not pay much attention to maintaining their plantations. With the recent spike in prices, they are concerned about the surge in coconut thefts.

ಗಗನಕ್ಕೇರಿದ ತೆಂಗಿನಕಾಯಿ ಬೆಲೆ

▸ ತಾವರೆಕೆರೆ ನಾಗರಾಜು

• **ತಾವರೆಕೆರೆ:** ತೆಂಗಿನ ಕಾಯಿ ಬೆಲೆ ಗ್ರಾಹಕರ ಕೈಗೆಟಕದ ಮಾದರಿಯಲ್ಲಿ ಬೆಲೆ ಹೆಚ್ಚಾಗುತ್ತಿದೆ. ಇತ್ತೀಚೆಗೆ ಒಂದು ಕಾಯಿಗೆ 75ರಿಂದ 80 ರೂ.ವರೆಗೆ ಹೆಚ್ಚಳವಾಗಿರುವುದರಿಂದ ಅಡುಗೆ ಮತ್ತಿತರ ತಿಂಡಿತಿನಿಸು,. ಪೂಜಾ ಕಾರ್ಯಗಳಿಗೆ ಅನಿವಾರ್ಯವಾಗಿರುವುದರಿಂದ ಎಷ್ಟೇ ಬೆಲೆ ಹೆಚ್ಚಳವಾದರೂ ಖರೀದಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕಳೆದ ವರ್ಷ ತೆಂಗಿನ ಬೆಲೆ ಸಾಧಾರಣವಾಗಿತ್ತು. 2015ರ ನಂತರ ತೆಂಗಿನ ಬೆಲೆ ಸಾಕಷ್ಟು ಬೆಲೆ ಹೆಚ್ಚಳವಾಗಿದೆ. ಇದರಿಂದ ಕೊಂಡುಕೊಳ್ಳು ಗ್ರಾಹಕರು ಹಿಂದುಮುಂದು ನೋಡಬೇಕಾಗಿದೆ. ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಬೆಲೆ ಕೆಜಿಗೆ 75 ರಿಂದ 85 ರೂ. ತನಕ ಏರುತ್ತಲೇ ಇದೆ. ಕಳೆದ ಎರಡು ವರ್ಷದ ಹಿಂದೆ ಕೆಜಿ ತೆಂಗಿನ ಕಾಯಿಗೆ 20 ರಿಂದ 25 ರೂ. ದರವಿತ್ತು. 2024ರಲ್ಲಿ ದಿಢೀರ್ 60 ರಿಂದ 65ರೂ.ಗೆ ಏರಿಕೆಯಾಗಿದೆ. ಒಂದೇ ವರ್ಷದಲ್ಲಿ ತೆಂಗಿನ ಬೆಲೆ ದ್ವಿಗುಣಗೊಂಡಿದೆ.

ತೆಂಗಿನ ಎಣ್ಣೆಯೂ ದುಬಾರಿ: ಸದ್ಯಕೆಜಿಗೆ 80ರ ರೂ. ಬೆಲೆಯ ಅಂತರದಲ್ಲಿದೆ. ಇದರ ಜತೆಗೆ ತೆಂಗಿನ ಎಣ್ಣೆಯದರವು ಗಗನಕ್ಕೇರುತ್ತಿದೆ. ಲೀಟರ್‌ಗೆ 200 ರೂರಿಂದ 230ರೂ.ಗೆ ಸಿಗುತ್ತಿತ್ತು. ಈಗ ದಿಢೀರ್ 300 ರಿಂದ 350ರೂ.ಗೆ ಏರಿಕೆಯಾಗಿದೆ. ಅಡುಗೆ ಮಾಡಲು ತರಕಾರಿ ಬೆಳೆಕಾಳ ಜತೆಗೆ ತೆಂಗಿನಕಾಯಿ ತುರಿ ಇದ್ದರೆ ಮಾತ್ರ ರುಚಿಹೆಚ್ಚಾಗುತ್ತದೆ. ಇದರಿಂದಾಗಿ ಅಡುಗೆ ಮತ್ತು ಪೂಜಾಕಾರ್ಯಗಳಿಗೆ ತೆಂಗಿನಕಾಯಿ ಬೆಲೆ ಎಷ್ಟೇಯಾದರೂ ಖರೀದಿಸಲೇ ಬೇಕಾಗಿದೆ.



ಬೆಲೆ ಹೆಚ್ಚಾದರೂ ಅಡುಗೆಗೆ ಬೇಕೇಬೇಕು

ಹಬ್ಬ ಹರಿದಿನದಲ್ಲಿ ಪೂಜೆಗೆ ಹಣ್ಣಿನ ಜತೆ ತೆಂಗಿನಕಾಯಿ ಉಪಯೋಗಿಸುವುದು ಹಿಂದೂಗಳ ಸಂಪ್ರದಾಯ. ಇದರ ಜತೆಗೆ ಯಾವುದೇ ಅಡುಗೆಗೆ ತೆಂಗಿನ ಕಾಯಿ ತುರಿ ಇದ್ದರೆ ಊಟಕ್ಕೆ ರುಚಿ. ತೆಂಗಿನಕಾಯಿ ಬೆಲೆ ಎಷ್ಟೇ ಹೆಚ್ಚಾದರೂ ಬಳಸುವುದು ಅನಿವಾರ್ಯ. ರುಚಿರುಚಿಯಾಗಿ ಅಡುಗೆ ಮಾಡಬೇಕಾದರೆ ತೆಂಗಿನಕಾಯಿ ಬೇಕೆ ಬೇಕು ಎಂದು ಗೃಹಿಣಿ ವತ್ಸಲ ಹೇಳಿದರು.

ಗ್ರಾಹಕರ ನಿರಾಸಕ್ತಿ

ಕೇರಳ ತಮಿಳುನಾಡು ಹಾಗೂ ರಾಜ್ಯದ ಮಂಗಳೂರು ಉಡುಪಿ ಹಾಗೂ ಇತರೆ ಕಡೆಯಿಂದ ತೆಂಗಿನಕಾಯಿ ತರಿಸುತ್ತಿದ್ದೇವೆ. ಇತ್ತೀಚೆಗೆ ದಿಢೀರ್ ಬೆಲೆ ಏರಿಕೆಯಿಂದ ಗ್ರಾಹಕರು ತೆಂಗಿನಕಾಯಿ ಖರೀದಿಸಲು ಹಿಂದೇಟು ಹಾಕುತ್ತಿದ್ದಾರೆ. ನಮಗೆ ವ್ಯಾಪಾರದ ಮೇಲೂ ಬರೆ ಎಳೆದಂತಾಗಿದೆ ಎಂದು ವ್ಯಾಪಾರಿ ಸುಬ್ರಮಣಿ ಹೇಳಿದರು.



ನುಸಿರೋಗದಿಂದ ಇಳುವರಿ ಕುಸಿತ

ರಾಜ್ಯದಲ್ಲಿ ತೆಂಗಿನಕಾಯಿ ಬೆಲೆ ಗಗನಕ್ಕೇರಿದೆ ನುಸಿ ರೋಗದಿಂದ ಹಲವೆಡೆ ತೆಂಗಿನ ಮರ ಒಣಗಿ ಹೋಗಿವೆ. ಉಳಿದ ಮರದಲ್ಲಿನ ಕಾಯಿಗಳು ಎಳನೀರಿಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದಲೂ ಸಹ ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಸಿಗದೆ ವ್ಯಾಪಾರಿಗಳು ಪರಿದಾಡುವಂತಾಗಿದೆ.

ತೆಂಗಿನ ಚಿಪ್ಪಿಗೂ ಬಂಗಾರದ ಬೆಲೆ



ತೆಂಗಿನ ಕಾಯಿ ಬೆಳೆಯುವ ರೈತರು ಬೆರಳಿಕೆಯಷ್ಟು ಮಾತ್ರ ಇದ್ದಾರೆ. ಇದರಿಂದ ತೆಂಗಿನ ಚಿಪ್ಪಿಗೂ ಬಂಗಾರದ ಬೆಲೆ ಸಿಗುತ್ತಿದೆ. ಇದರಲ್ಲೆರ ಮಧ್ಯೆ ಎಳನೀರು ಬೇಡಿಕೆ ಹೆಚ್ಚಳವಾಗಿದೆ. ತೆಂಗಿನಕಾಯಿ ಪೂರೈಕೆ ಪ್ರಮಾಣ ಗಣನೀಯವಾಗಿ ಕುಸಿತವಾಗಿದೆ. ತೆಂಗಿನ ಕಾಯಿ ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಿದೆ.

Hosadiganta Pg 10

ಗ್ರಾಮಾಂತರ ಜಿಲ್ಲೆಯ ಪ್ರಮುಖ ಬೆಳೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತೆಂಗು ಪ್ರಮುಖ ಬೆಳೆ ಆಲ್ಲದ್ದಿದ್ದರೂ ಅಲ್ಲಲ್ಲಿ ತೆಂಗಿನ ಮರವನ್ನು ಬೆಳೆಸಲಾಗುತ್ತಿದೆ. ಒಂದು ತೆಂಗಿನ ಸಸಿಯನ್ನು ನೆಟ್ಟು ಪೋಷಿಸಿ ಬೆಳೆಸಿದರೆ ಜೀವನ ಪೂರ್ತಿ ಒಂದು ಕುಟುಂಬ ಸಾಕಷ್ಟು ಆದಾಯ ಕಾರಣಬಹುದು. ಈ ತೆಂಗಿನ ಮರ ಬಹು ಉಪಯೋಗಿಯಾಗಿರುವುದರಿಂದ ಕುಟುಂಬದ ಆದಾಯವನ್ನು ಹೆಚ್ಚಿಸಿ ನೆಮ್ಮದಿ ಜೀವನಕ್ಕೆ ಅವಕಾಶ ನೀಡಿದೆ. ಅಡುಗೆಗೆ ಸರಿ ಹೋಗುತ್ತದೆ ಎಂದು ರೈತರು ಅಂದಾಜು ಮಾಡುತ್ತಾರೆ. ಕೆಲವು ರೈತರ ತೋಟದ ಬದಿಯಲ್ಲಿ ನೂರಾರು ಸಸಿಯನ್ನು ನೆಟ್ಟು ಬೆಳಸಿ ಕಾಯಿಯನ್ನು ಮಾರಾಟ ಮಾಡುವ ಪದ್ಧತಿ ಇದೆ. ಆದರೆ, ಬಿಸಿಲಿನ ತಾಪಕ್ಕೆ ಮರದಲ್ಲೆ ಹೂವು ಉದುರಿ ಹೋದ ಕಾರಣ ಫಸಲು ಕಡಿಮೆ ಬಂದು ಮಾರುಕಟ್ಟೆಯಲ್ಲಿ ಬಂಪರ್ ಬೆಲೆಗೆ ಮಾರಟವಾಗುತ್ತಿದೆ. ಇದರಿಂದ ಒಂದು ಕಡೆ ನಷ್ಟವಾದರೆ ಲಾಭದಲ್ಲಿ ಕೈತುಂಬಾ ಹಣ ಸಿಗುತ್ತಿದೆ. ರೈತರ ಮೊಗದಲ್ಲಿ ಮಂದಹಾಸ ಎದ್ದುಕಾಣುತ್ತಿದೆ. ಆದರೆ, ಗ್ರಾಹಕನ ಜೇಬಿಗೆ ಕತ್ತರಿ ಬೀಳುತ್ತಿದೆ. ಬೇಡಿಕೆಗೆ ತಕ್ಕಂತೆ ಪೂರೈಕೆ ಆಗದಿರುವುದು ತೆಂಗಿನಕಾಯಿ ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ.

ಮಾವಿನ ರಾಯಭಾರ

V-karantaka Pg 06

ಹಣ್ಣಿನ ರಾಜ ಕಟ್ಟಿದ ರಾಜತಾಂತ್ರಿಕ ಸಿಹಿ

• ಕೀರ್ತಿ ಕೋಲ್ಹಾರ್

ಹಣ್ಣಿಗೆ ರಾಜ ಮಾವಿನಹಣ್ಣನ್ನು ನಿರಾಕರಿಸುವವರು ಯಾರಿದ್ದಾರೆ? ರುಚಿಯಿಂದ ಮೈಮನಗಳನ್ನು ಮರಳುವ ಮಾವಿನಹಣ್ಣಿಗೆ ಕೇವಲ ಸಿಹಿ ಗುಣವಷ್ಟೇ ಇಲ್ಲ; ಸಂಬಂಧ ಸುಧಾರಿಸುವ, ದ್ವೇಷ ಮರೆಸುವ ದೊಡ್ಡ ಗುಣಗಳಿವೆ ಎಂಬುದನ್ನೂ ಈ ಲೋಕ ಕಂಡುಕೊಂಡಿದೆ. ಒಂದು ದೇಶದ ಮಾವಿನ ಹಣ್ಣು ಸ್ನೇಹಿತನಾಗಿ, ನೆರೆಹೊರೆಯವನಾಗಿ, ಸಂಧಾನಕಾರನಾಗಿ, ಸಾಂತ್ವನ ಹೇಳುವ ಮಿತ್ರನಾಗಿ, ಪ್ರೀತಿಯ ರಾಯಭಾರಿಯಾಗಿ ಇನ್ನೊಂದು ದೇಶಕ್ಕೆ ಹೋದ ನಿದರ್ಶನಗಳು ಸಾಕಷ್ಟು ಈಗ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಮೊ. ಮುಹಮ್ಮದ್ ಯೂನಸ್, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ! ಸಾರ ಕೆ.ಜಿ. ಮಾವಿನಹಣ್ಣುಗಳನ್ನು ಬಾಕ್ಸ್‌ಗಳಲ್ಲಿಕುಂಬ ಕಳುಹಿಸಿರುವುದೂ ಇಂಥದ್ದೆ 'ಮಾವಿನ ರಾಜತಾಂತ್ರಿಕತೆ'!

ರಾಜಕೀಯ ಅಥವಾ ರಾಜತಾಂತ್ರಿಕ ಸಂಬಂಧ ಬಲವರ್ಧನೆಯಲು ಮಾವಿನಹಣ್ಣುಗಳನ್ನು ಉಡುಗೊರೆಯಾಗಿ ನೀಡುವ ಪರಂಪರೆ ಬಾಂಗ್ಲಾದೇಶ ಮಾತ್ರವಲ್ಲ, ಭಾರತ, ಪಾಕಿಸ್ತಾನಗಳಲ್ಲೂ ರೂಢಿಗತ. ರಾಜತಾಂತ್ರಿಕ ಕೊಡುಗೆಯಾಗಿ ಹೊರಟ ಮಾವು, ಇನ್ನೊಂದು ದೇಶದಲ್ಲಿ ದೇವರಾಗಿದ್ದೂ ಇದೆ; ಯಶಸ್ವಿ ಸಂಧಾನಕಾರನಾಗಿದ್ದೂ ಇದೆ. ಹಾಗೆ ದೇವರಾದ ಕಥೆ ನೋಡುವುದಾದರೆ...

1968ರ ಬೇಸಿಗೆ. ಪಾಕಿಸ್ತಾನದ ಆಗಿನ ವಿದೇಶಾಂಗ ಸಚಿವ ಮಿಯಾನ್ ಅರ್ಷದ್ ಹುಸೇನ್ ಅವತ್ತು ಚೀನಾಕ್ಕೆ ಭೇಟಿ ನೀಡಿದ್ದರು. ಅರ್ಷದ್ ಅಲ್ಲಿಚೀನಾದ ಸರ್ವೋಚ್ಚನಾಯಕ



ಮಾವೋ ಝುಡಾಂಗ್‌ರನ್ನು ಭೇಟಿಯಾಗಿ 40 ಪೆಟ್ಟಿಗೆಗಳಲ್ಲಿ ಕೊಂಡೊಯ್ದಿದ್ದ ಮಾವಿನಹಣ್ಣುಗಳನ್ನು ಉಡುಗೊರೆ ಕೊಟ್ಟರು.

ಆದುವರೆಗೂ ಚೀನಾ ಮಾವಿನಹಣ್ಣುಗಳ ಬಗ್ಗೆ ತಿಳಿದಿರಲಿಲ್ಲ. ಹಣ್ಣುಗಳಿಂದರೆ ಆಪ್ತಭಾವ ಎನ್ನುವಂತಿದ್ದ ಮಾವೋ ಝುಡಾಂಗ್, ಪಾಕ್ ಕೊಟ್ಟ ಮಾವಿನ ರುಚಿಯನ್ನೇ ನೋಡಲಿಲ್ಲ. ಬದಲಾಗಿ, ವಿವಿಗಳ ಸಿಬ್ಬಂದಿಗೆ, ಕಾರ್ಖಾನೆಗಳ ಕಾರ್ಮಿಕರಿಗೆ ಹಂಚಿದ. ಆ ಹಣ್ಣನ್ನು ಕಂಡ ಕಾರ್ಮಿಕರ ಪ್ರತಿಕ್ರಿಯೆ ಹೇಗಿತ್ತು ಎನ್ನುವುದನ್ನು 'ಇತಿಹಾಸಕಾರ ಆಲ್ಫ್ರಡ್ ಮರ್ಕ್ ತಮ್ಮ 'ಮಾವೋಸ್ ಗೋಲ್ಡನ್ ಮ್ಯಾಂಗೋಸ್ ಆಂಡ್ ದಿ ಕಲ್ಚರಲ್ ರೆವಲ್ಯೂಷನ್' ಕೃತಿಯಲ್ಲಿ ವಿವರಿಸಿದ್ದಾರೆ.


ಮೊದಮೊದಲಿಗೆ ಮಾವಿನ ಮೈಬಣ್ಣ ಚೀನಿಯರಿಗೆ ಪ್ರೀತಿ ಮತ್ತು ನಂಬಿಕೆಯ ಸಂಕೇತವಾಯಿತು. ಮರ್ಕ್ ಹೇಳುವಂತೆ, ಆ ಹಣ್ಣನ್ನು ಕಾರ್ಮಿಕರು 'ಮಾವೋನ ಆಶೀರ್ವಾದ' ಎಂಬಂತೆ ಭಾವಿಸಿದರು. ಮೊದಲು ದಿನ ಮಾವಿನ ಹಣ್ಣುಗಳನ್ನು ಮೆಚ್ಚುತ್ತಾ, ಮುದ್ದಿಸುತ್ತಾ, ಮಾವೋ ತಮಗೆ ಯಾವುದೋ ದೈವಿಕ ಮನುಷ್ಯನೇ ನೀಡಿದ್ದಾರೆ ಅಂತಲೇ ಭಾವಿಸಿದರು. ಕಾರ್ಮಿಕರ ಈ ನಡವಳಿಕೆ ಕಂಡ ಚೀನಾ ಆಧಿಕಾರಿಗಳಲ್ಲಿ ಆಪಾಶಕಿಗಳಾಗಿದರು. ಆದರೂ, ಚೀನಾ ಕಮ್ಯುನಿಸ್ಟ್ ಪಕ್ಷ ಮಾವಿನ ಹಣ್ಣಿನ ಆಲೆಯನ್ನು ಮಾವೋನ ಪ್ರಚಾರದ ತಂತ್ರಗಾರಿಕೆಗೆ ಬಳಸಿತು. ಮತ್ತಷ್ಟು ಹಣ್ಣುಗಳನ್ನು ವಿವಿಧ ಕಾರ್ಖಾನೆಗಳಿಗೆ ಹಂಚಲಾಯಿತು.



ಮೋದಿಕ ಫೋಕಸ್


ಯಾರ್ಯಾರಿಂದ ಮಾವಿನ ಡಿಪ್ಲೊಮಸಿ?

ನೆಹರು ಜತೆಗೊಯ್ಯುತ್ತಿದ್ದ ಮಾವಿನ ಹಣ್ಣು



ದೇಶದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರು ತಮ್ಮೂರಿನ (ಅಲಹಾಬಾದ್) ಪೇರಳೆ ಹಣ್ಣನ್ನು ಮೆಚ್ಚುವವರಾದರೂ, ಮಾವಿನ ಹಣ್ಣಿನ ರಾಜತಾಂತ್ರಿಕತೆಯನ್ನು ಪೋಷಿಸಿದರು. 1950ರ ದಶಕದಲ್ಲಿನೆಹರು ಕೆಲವು ರಾಷ್ಟ್ರಗಳಿಗೆ ಭೇಟಿಯಾತ್ತಾಗ, ಮಾವಿನಹಣ್ಣಿನ ಉಡುಗೊರೆ ನೀಡಿದ್ದರು. ಮಾವಿನ ಸಸಿಯನ್ನು ಕೊಟ್ಟು ನಿದರ್ಶನಗಳಿವೆ.

ಜಿಯಾ ಉಲ್ ಹಕ್‌ರಿಂದ ಇಂದಿರಾಗೆ ಮಾವು




1981ರಲ್ಲಿ ಪಾಕಿಸ್ತಾನದ ಅಧ್ಯಕ್ಷ ಜಿಯಾ ಉಲ್ ಹಕ್ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಮಾವಿನ ಹಣ್ಣುಗಳ ಬುಟ್ಟಿ ಕಳುಹಿಸಿದ್ದರು. 'ಅನ್ವರ್ ರತ್ತೋಲ್' ಎಂಬ ಹೆಸರಿನ ಆ ಹಣ್ಣಿನ ಮೂಲ ತಳಿ ಉತ್ತರ ಪ್ರದೇಶದ್ದು ಎಂಬ ಚರ್ಚೆಗಳೆದ್ದವು. ದೇಶ ವಿಭಜನೆ ಸಂದರ್ಭದ್ದು.ಈ ತಳಿ ಪಾಕಿಸ್ತಾನಕ್ಕೆ ಒಯ್ಯಲಾಗಿತ್ತು ಎಂದು ಹೇಳಲಾಗುತ್ತಿದೆ.

ಸಿಂಗ್ ಕೊಟ್ಟಮ್ಯಾಂಗೋವನ್ನು ಬುಷ್ ಸವಿದಾಗ...



ಆದು 2006. ಭಾರತ ಮಾವಿನ ಹಣ್ಣನ್ನ ಅತಿದೊಡ್ಡ ರಫ್ತುದಾರನೇ ಆದರೂ, 2 ದಶಕಗಳಿಂದ ಭಾರತ ಮ್ಯಾಂಗೋವನ್ನು ಅಮೆರಿಕ ತನ್ನೊಳಗೆ ಬಿಟ್ಟುಕೊಂಡಿರಲಿಲ್ಲ. ಇಂಥ ಹೊತ್ತಿನಲ್ಲಿ ಅಮೆರಿಕ ಅಧ್ಯಕ್ಷ ಜಾರ್ಜ್ ಡಬ್ಲ್ಯೂ ಬುಷ್ ಭಾರತಕ್ಕೆ ಭೇಟಿ ಕೊಟ್ಟರು. ಬುಶ್‌ಗೆ ಮಾವಿನ ಹಣ್ಣುನೀಡಿದ ಪ್ರಧಾನಿ ಮನಮೋಹನ್ ಸಿಂಗ್ ಭಾರತದ ಮಾವಿಗೆ ಅಮೆರಿಕದ ಬಾಗಿಲು ತೆರೆಯಲು ಕೋರಿದ್ದರು. ರುಚಿಗೆ ಮನಸೋತ ಬುಶ್ ಒಪ್ಪಿದ ಬಳಿಕ, ಕೆಲವೇ ತಿಂಗಳಲ್ಲಿ ಭಾರತದ ಆಲ್ಫೋನ್ಸೊ ಮತ್ತು ಕೇಸರಿ ಮಾವಿನ ಹಣ್ಣುಗಳು ಪಾಪಿಂಗ್ಸ್‌ನಿಲ್ಲಿ ಇಳಿದವು.

ನವಾಜ್ ಶರೀಫ್, ಮೋದಿಗೆ ಮಾವು ಕಳಿಸಿದ್ದು



ಪಾಕಿಸ್ತಾನವು 1980ರ ದಶಕದಿಂದಲೂ ಭಾರತೀಯ ನಾಯಕರಿಗೆ ಮಾವಿನ ಹಣ್ಣುಗಳನ್ನು ಕಳುಹಿಸುವ ಸಂಪ್ರದಾಯ ಮುಂದುವರಿದೆ. ಆದರೆ, ಆವರೆ ಈ ರಾಜತಾಂತ್ರಿಕತೆಗೆ ಭಾರತ ಸ್ಪಂದಿಸಲಿಲ್ಲ.ಎನ್ನುವುದು ಬೇರೆ ಮಾತು. 2015ರ ಈದ್ ಹಬ್ಬದಂದು ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫ್, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ 10 ಕೆ.ಜಿ. ಮಾವಿನ ಹಣ್ಣುಗಳನ್ನು ಕಳುಹಿಸಿದ್ದರು. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಗೆ 15 ಕೆ.ಜಿ. ಮತ್ತು ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಮನಮೋಹನ್ ಸಿಂಗ್ ಅವರಿಗೂ ತಲಾ 10 ಕೆ.ಜಿ. ಮಾವಿನ ಹಣ್ಣುಗಳನ್ನು ಕಳುಹಿಸಲಾಗಿತ್ತು. ಆದಾಗ್ಯೂ, ಈ ಮಾವಿಗೆ ಗಡಿ ಉದ್ದಗ್ತಿತೆ ತಣಿಸಲಾಗಲಿಲ್ಲ.

ಮಾವಿನಹಣ್ಣನ್ನು ಹೇಗೆ ಹಿಡಿಯಬೇಕು, ಹೇಗೆ ಪೂಜಿಸಬೇಕು ಎಂಬ ಕಲಿಕೆಗಳು ಶುರುವಾದವು. ಮಾವು ಮತ್ತು ಮಾವೋನ ಆಪರಾಮಕಾರ. ಮಾವಿನ ಬಗ್ಗೆ ಯಾರಾದರೂ ಭಿಪ್ರಾವಾಗಿ, ವ್ಯಂಗ್ಯವಾಗಿ ಮಾತನಾಡಿದರೆ ಅವರನ್ನು ಖಂಡಿಸಿ, ಕಾರ್ಖಾನೆಯಿಂದ ಹೊರ ದಬ್ಬಲಾಯಿತು. ಮೆರವಣಿಗೆ, ಬ್ಯಾಂಡ್ ಗೌರವ, ಬ್ಯಾಬ್ಜೋ... ಸಕಲ ಗೌರವಗಳೂ ಮಾವಿನ ಹಣ್ಣಿಗೆ ದಕ್ಕಿದವು. ಮಾವನ್ನು ಸ್ವಾತಿಸಲು ದೊಡ್ಡ ಸಮಾರಂಭ ಆಯೋಜಿಸಿದ್ದ ಜವಳಿ ಫ್ಯಾಕ್ಟರಿಯ ನಿದರ್ಶನವನ್ನೂ ಮರ್ಕ್ ವಿವರಿಸುತ್ತಾರೆ: ''ಮಾವಿನಹಣ್ಣುಗಳನ್ನು ಮೇಣದಲ್ಲಿಸಂರಕ್ಷಿಸಿ ದೊಡ್ಡ ಸಭಾಂಗಣದಲ್ಲಿ ಇಡಲಾಗಿತ್ತು. ಕಾರ್ಮಿಕರು ಕಾರ್ಖಾನೆಯೊಳಗೆ ಬಂದಾಕ್ಷಣ, ಅದಕ್ಕೆ ತಲೆಬಾಗಿ ಗೌರವ ಸೂಚಿಸಿ, ಕೆಲಸ ಆರಂಭಿಸುತ್ತಿದ್ದರು''.

ಬೀಜಿಂಗ್‌ನ ಒಂದು ಫ್ಯಾಕ್ಟರಿಗೆ ಮಾವು ತಲುಪಿದಾಗ, ಅಲ್ಲಿನ ಜನ ಈ ಹಣ್ಣನ್ನು ತಿನ್ನಬೇಕೆ ಅಥವಾ ಸಂರಕ್ಷಿಸಬೇಕೇ ಎಂಬ ಗೊಂದಲಕ್ಕೆ ಬಿದ್ದರಂತೆ. ಅಂತಿಮವಾಗಿ, ಫಾರ್ಮಲ್ಡಿಹೈಡ್‌ನಲ್ಲಿ ಇರಿಸಿ ಸಂರಕ್ಷಿಸಿದರು. ಆಲ್ಲದೆ, ಆದರ ಮೇಣದ ಪ್ರತಿಕೃತಿಗಳನ್ನೂ ತಯಾರಿಸಿ ಪ್ರತಿ ಕಾರ್ಮಿಕನೂ ನೀಡಲಾಯಿತು. ಆದೊಂದು ಫ್ಯಾಕ್ಟರಿಯಲ್ಲಿ ಮಾವು ಕೊಳೆಯಲು ಆರಂಭಿಸಿದಾಗ, ಕಾರ್ಮಿಕರು ಹಣ್ಣಿಗೆ ತಿರುಳನ್ನು ನೀರನಲ್ಲಿಕುದಿಸಿ, 'ಪವಿತ್ರ ದ್ರವ' ಎಂಬಂತೆ ಹೊಟ್ಟಿಗಿಳಿಸಿಕೊಂಡಿದ್ದರು. ದೇಶಾದ್ಯಂತ ಮಾವಿನಹಣ್ಣು ಇಷ್ಟೆಲ್ಲ ಅಲೆ ಎಬ್ಬಿಸಿದ್ದನ್ನು ಕೇಳಿ, ಮಾವೋ ನಕ್ಕದ್ದು ಎಂಬ ವಿವರಿಸುತ್ತಾರೆ ಮರ್ಕ್.

ಮಾವೋನ ಆ ಕಾಲಘಟ್ಟ ಸಾಂಸ್ಕೃತಿಕ ಕ್ರಾಂತಿಯ ಪರ್ವ. ಚೀನಿಯರು ನಾಸ್ತಿಕವಾದಕ್ಕೆ ಹೊರಳುತ್ತಿದ್ದ ಹೊತ್ತು. ದೇಶಾದ್ಯಂತ ದೇವಾಲಯಗಳನ್ನು ಕೆಡವಲಾಗಿತ್ತು. ವಿಗ್ರಹಗಳನ್ನು ಛಿದ್ರಛಿದ್ರಗೊಳಿಸಲಾಗಿತ್ತು. ಆದರೆ, ಇದೇ ಹೊತ್ತಿನಲ್ಲಿಕಲೆವಡೆ ಮಾವಿಹಣ್ಣನ್ನು ದೇವರ ಜಾಗದಲ್ಲಿಟ್ಟು ಪೂಜಿಸಲಾಗಿರುವ ಅಲಂಕರಿಸಿದ್ದರು. ಮಾವೋನ ಪ್ರತಿರೂಪವೆಂಬಂತೆ ಭಾವಿಸಿ, ಸುತಿಗೆತೆಗೆಗಳನ್ನು ಹಾಡಿದ್ದರು. 'ಮನುಷ್ಯನಿಗೆ ಅಮರತ್ವ ನೀಡುವ ಹಣ್ಣು' ಎಂಬ ವದಂತಿಗಳೂ ಹಬ್ಬಿದ್ದಾಗ, ರಸ ಕುದಿಸಿ, ಕೆಲವರು ಟಾನಿಕ್‌ನಂತೆಯೇ ಸೇವಿಸಿದ್ದರು.

ಜನರ ಮಾವಿನ ಹಣ್ಣಿನ ಹುಚ್ಚನ್ನು ಚೀನಾದ ಕಮ್ಯುನಿಸ್ಟ್ ಪಾರ್ಟಿ ಮಾರುಕಟ್ಟೆಗೂ ಬಳಸಿಕೊಂಡಿತು. ಮಾವಿನಹಣ್ಣಾಕಾರದ ಹಾಗೂ ಪರಿಮಳದ ಸೋಪು, ಸಿಗರೇಟು, ವಾಶ್ ಲೇಸ್, ಬೆಡ್ ಶೀಟುಗಳನ್ನೂ ತಯಾರಿಸಿ ನೋಟು ಎಣಿಸಿತ್ತು. ಸಿಚುವಾನ್‌ನಲ್ಲಿ ದಂತವೈದ್ಯ ಡಾ. ಹಾನ್ ಎಂಬಾತ ಮಾವಿನಹಣ್ಣನ್ನು ಅಪಮಾನಿಸಿದಾಗ, 'ದೇವದೂಷಣೆ' ಎಂಬ ಆರೋಪ ಹೊತ್ತು ಜೈಲುಪಾಲಾದ. ಆತನನ್ನು ಟ್ರಕ್‌ನ ಹಿಂಭಾಗಕ್ಕೆ ಕಟ್ಟಿ, ನಗರದಲ್ಲಿ ಮೆರವಣಿಗೆ ಮಾಡಿ, ಅಂತಿಮವಾಗಿ ಗಲ್ಲಿಗೇರಿಸಿತು ಚೀನಾ.

ಯಾರೋ ಹಬ್ಬಿದ ಪುಕಾರುಗಳಿಂದ ಮಾವಿಗೆ ಸಿಕ್ಕ ಈ ಜನಪ್ರಿಯತೆ ಧನಕ್ಕೆ ಕುಸಿಯುವ ಕಾಲವೂ ಬಂತು. ಸುಮಾರು 18 ತಿಂಗಳ ನಂತರ, ಮೆದಲು ಪೂಜಿಸಿದ್ದ ಮೇಣದ ಮಾವಿನಹಣ್ಣನ್ನು ಮೊಬ್ಬಿತ್ತಿಯಾಗಿ ಜನ ಬಳಸತೊಡಗಿದರು. 1976ರ ಒಂದು ದಿನ. ಮಾವೋ ಝುಡಾಂಗ್ ಆನಾರೋಗ್ಯದಿಂದ ಹಾಸಿಗೆ ಹಿಡಿದ. ಆತನ ಸಾವು ಪತ್ರಿರದಲ್ಲಿದೆ ಎಂದು ಗೊತ್ತಾಗಿದ್ದೇ ತಡ ಚೀನಾದಲ್ಲಿ ಉತ್ತರಾಧಿಕಾರದ ಹುಡುಕಾಟ ಶುರು. ಆದರೆ, ಮಾವೋನ ಪತ್ನಿ ಜಿಯಾಂಗ್ ಕ್ವಿಂಗ್, ಪತಿಯ ಬದಲಿಗೆ ಮಾವಿನ ಹಣ್ಣನ್ನೇ ಚುನಾವಣಾ ಪ್ರಚಾರಕ್ಕೆ ಬಳಸಲು ಮುಂದಾದಳು. ಪ್ರಚಾರ ಸಭೆ, ಸಮಾರಂಭ ಎಲ್ಲದರಲ್ಲೂ ಮಾವೆ ಹಾಜರು!. 'ಸಾಂಗ್ ಆಫ್ ದಿ ಮ್ಯಾಂಗೋ' ಸಿನಿಮಾವೂ ಬಿಡುಗಡೆಗೆ ಬಂತು. ಆದರೆ, ಈ ದುಸ್ಸಾಹಸಗಳೆಲ್ಲ ವಿಫಲವಾಗಿ, ಮಾವೋ ಸಾವನ್ನಪ್ಪಿದ ನಂತರ, ಜಿಯಾಂಗ್ ಕ್ವಿಂಗ್‌ಳೇ ಚೀನಾ ಜೈಲಿಗಟ್ಟಿದು. ಈಗ ಚೀನಾದಲ್ಲಿ ಸೇಬು, ಕಿತ್ತಳೆಗಳಂತೆ ಮಾವು ಕೂಡ ಸಾಮಾನ್ಯ ಹಣ್ಣಷ್ಟೇ!

keerthi.ks@timesofindia.com

ZSI scientists develop DNA barcodes for 169-yr-old spiny tree mouse species

Niranjan.Kaggere
@timesofindia.com


TOI

LIVING FOSSILS: The frugivorous species that live in tree holes are spread across forests between Kodagu and Thiruvananthapuram

Bengaluru: Nearly two centuries after discovering a species in the biological hotspot of Western Ghats, scientists from Zoological Survey of India (ZSI) successfully generated DNA barcodes for the Malabar spiny tree mouse (Platacanthomys lasiurus) — often hailed as a living fossil. The DNA barcoding, similar to generating an Aadhaar number for citizens, paves the way for a comprehensive understanding of the evolutionary history of these species.

Sources in ZSI told **TOI** though the species was discovered in 1856, it had no individual identity as a species and was categorised under the subfamily of Typhlomys, the Chinese pygmy dormouse, due to similar features. However, scientists have now successfully uncovered the polymorphism features of these species.

"The DNA barcoding and generation of genetic data for these mouse species have established that they are much more ancient than their Chinese counterparts that were documented in recent centuries," said Dr KP Dinesh, a scientist from ZSI, western regional centre, Pune.

These frugivorous and nocturnal species live in tree holes. "They are distributed across forests between Kodagu in Karnataka and Thiruvananthapuram in Kerala. Unlike all species that have undergone morphological changes as part of evolution, these spiny tree mice have not undergone any change. Hence, they are referred to as living fossils," said Dr Dinesh.

"Molecular dating suggests that origin of the ancestors of these spiny tree mice dates back to Eocene period (56 to 33.9 million years ago), which is likely a Gondwanan relic that persisted in Western Ghats. Hence, the present lineage of Platacanthomys could be a relict taking refuge in the hill ranges of the ghats, whose ancestors might have gone extinct due to various geological events in the past," the scientist explained.

The latest specimen of the Malabar spiny tree mouse was sourced from Suryamudi in Wayanad district of Kerala during a periodic survey on small mammals. Subsequently, scientists from ZSI's western regional centre, Western Ghats regional centre in Kozhikode, and southern regional centre in Chennai collaborated for the study and published the findings in the Journal of Animal Diversity. Dr Dhiriti Banerjee, director of ZSI, said this genetic data on these historic and enigmatic species is vital, especially in the backdrop of climate change.

Dr SS Talmale, the lead author, highlighted the immediate need for targeted habitat conservation of these species that live within 50 metres to 2,270 metres altitude. "They have already been listed as vulnerable on the IUCN Red List and protected under Schedule II of the Wildlife Act 1972," he pointed out.

Scientist Dr MJ Palot described it as a very elusive and rare species. "Despite years of fieldwork, I have seen it only a few times, and the specimen recovery at Suryamudi is indeed a rare chance."

Times of Ind
Pg 05

Confined field trials of GM maize to begin at Punjab university

Vikas Vasudeva
CHANDIGARH


Trials will study weed-control efficacy in herbicide-tolerant maize hybrids.

The field trials of two kinds of genetically modified (GM) maize are expected to begin this kharif (summer) season at the Punjab Agricultural University, weeks after the Genetic Engineering Appraisal Committee, the country's top regulator for the sector, gave the nod for the trials after receiving consent from the Punjab government.

In its meeting in June, the committee recommended a proposal by Bayer Crop Science Ltd. for the conduct of confined field trials of herbicide-tolerant transgenic maize and insect-resistant transgenic maize at the Ludhiana-based university. The trials will study weed-control efficacy in herbicide-tolerant maize hybrids with the application of glyphosate-K salt, and the efficacy of insect-protected maize hybrids against targeted lepidopteran pests.

"The trials are for research purposes only, and we are not going to recommend that it (GM maize) should be grown commercially or not. It's for the Central government to take a call," Punjab Agricultural University Vice-Chancellor Satbir Singh Gosal told *The Hindu*.

The Coalition for a GM-Free India, a platform advocating safe and sustainable agriculture, has urged the Punjab government to withdraw its no-objection certificate for the trials.

In a letter to the Punjab Agriculture Minister, Kavitha Kuruganti, co-convener of the coalition, said that the State government had an issued order prohibiting the usage of glyphosate, a deadly herbicide, with a large body of scientific literature pointing to its negative impacts on human health and the environment.

"How can the university experiment with herbicide-tolerant maize that has been modified to withstand the application of glyphosate, which is in itself against the legally-approved label claim for glyphosate in India's pesticides regulatory regime?" Ms. Kuruganti said.

Hindu
Pg 08

ರುಚಿಯ ರಾಣಿ ಎಣ್ಣೆಅಣಬೆ

ಮಳೆಯೆಂಬ ಮಾಯಾಂಗನೆಯ ವರದಿಂದ ಜನ್ಮ ತಾಳುವ ಅಣಬೆಗಳು ಈಗ ಮಲೆನಾಡಿನ ಮನೆ ಮನೆಯಲ್ಲೂ ಖಾದ್ಯವಾಗಿ ಪರಿಮಳ ಬೀರುತ್ತವೆ. ಈ ಪೈಕಿ ಎಣ್ಣೆಅಣಬೆಯ ರುಚಿಯೇ ಅದ್ಭುತ.

ರಾಘವೇಂದ್ರ ಈ. ಹೊರಬೈಲು
feedbacklvk@vijaykarnataka.com



ದೇಸಿ ರುಚಿ

ಮಲೆನಾಡು ಭಾಗಗಳಲ್ಲಿ ಬೆಳೆಯುವ ಅನೇಕ ಬಗೆಯ ಅಣಬೆಗಳಲ್ಲಿ ತಿನ್ನಲು ಯೋಗ್ಯ ಮತ್ತು ವಿಷಪೂರಿತ ಅಣಬೆ ಎಂಬ ವಿಧಗಳು ಪ್ರಮುಖವಾಗಿವೆ. ಅಣಬೆಗಳ ಬಗ್ಗೆ ಸ್ಪಷ್ಟ ಮಾಹಿತಿ ಇರುವವರು ಮಾತ್ರ ಈ ವೃತ್ಯಾಸ ಗುರುತಿಸಬಲ್ಲರು. ಮಲೆನಾಡಿನವರಿಗೆ ಈ ವೃತ್ಯಾಸ ತಿಳಿದಿರುತ್ತದೆ. ವೃತ್ಯಾಸ ತಿಳಿಯದೆ ವಿಷಪೂರಿತ ಅಣಬೆ ತಿಂದರೆ ಹೊಟ್ಟೆ ನೋವು, ವಾಂತಿ, ಬೇಧಿ ಗ್ಯಾರಂಟಿ. ಜೀವಕ್ಕೇ ಅಪಾಯ ತರಬಲ್ಲ ಅಣಬೆಗಳೂ ಇವೆ ಎಂದಿದ್ದಾರೆ ತಜ್ಞರು.

ಅಣಬೆಗಳ ರಾಜ ಎಣ್ಣೆಅಣಬೆ: ಮಲೆನಾಡಿನಲ್ಲಿ ಸಿಗುವ ಪ್ರಮುಖ ಅಣಬೆಗಳೆಂದರೆ ಹೆಗ್ಗಾಲಣಬೆ, ಎಣ್ಣೆಅಣಬೆ, ನುಚ್ಚಣಬೆ ಇತ್ಯಾದಿ. ಈ ಪೈಕಿ ಎಣ್ಣೆಅಣಬೆಗೆ ರಾಜನ ಸ್ಥಾನ. ಇದರ ಮೇಲ್ಭಾಗ ಮುಟ್ಟಿದರೆ ತುಂಬಾ ನಯವಾಗಿ, ಎಣ್ಣೆ ಹಚ್ಚಿದಂತೆ ಹೊಳೆಯುತ್ತದೆ. ಎಣ್ಣೆಯ ಪಸೆ ಕೈಗೆ ಹತ್ತುತ್ತದೆ. ಹಾಗಾಗಿಯೇ ಹಿಂದಿನವರು ಇದಕ್ಕೆ ಎಣ್ಣೆಅಣಬೆ ಎಂದು ಹೆಸರಿಟ್ಟಿರಬಹುದು. ಒಂದು ಜಾಗದಲ್ಲಿ ಒಂದೇ ಅಣಬೆ, ಕೆಲವೊಮ್ಮೆ ಮಾತ್ರ ಎರಡ್ಮೂರು ಹುಟ್ಟುವ ಎಣ್ಣೆಅಣಬೆಗಳ ರುಚಿಗೆ ಸಾಟಿಯೇ ಇಲ್ಲ ಎನ್ನಬಹುದು. ಹುಟ್ಟುವಾಗಲೇ ಛತ್ರಿಯಂತೆ ಅರಳಿ ನಿಲ್ಲುವ ಇವನ್ನು ನೋಡುವುದೇ ಒಂದು ಸೊಬಗು. ಬಾಲ್ಯದ ಆಡಿಪ್ಪೋ ಮಳೆಗಾಲಗಳು ಎಣ್ಣೆಅಣಬೆಯ ಗಮ್ಮತ್ತಿನ ಊಟದಲ್ಲಿ ಕಳೆದು ಹೋದವೆಂದರೆ ಅತಿಶಯೋಕ್ತಿಯಲ್ಲ.

ಸವಿರುಚಿ: ಹೆಗ್ಗಾಲಣಬೆ ಕಾಡಿನ ಕಾಟಿಯಂತೆ (ಕಾಡುಕೋಣ) ಹಿಂಡುಹಿಂಡಾಗಿದ್ದರೆ, ಎಣ್ಣೆಅಣಬೆಗಳು ಏಕಾಂಗಿಯಾಗಿ ತಿರುಗಾಡುವ ಕಾಡಿನ ರಾಜಹುಲಿಯಂತೆ, ಕೆಲವೊಮ್ಮೆ ಒಂದೆರಡು ಮರಿಗಳ ಜೊತೆ ಸುತ್ತುವ ಹೆಣ್ಣು ಹುಲಿಯಂತೆ ಎದ್ದು ನಿಂತಿರುತ್ತವೆ. ರುಚಿಯಲ್ಲಿಯೂ ಅಷ್ಟೇ. ನೀರಿಗೂ ಎಳನೀರಿಗೂ ಇರುವ ವೃತ್ಯಾಸದಷ್ಟು, ಹೆಗ್ಗಾಲಣಬೆ ನೀರಾದರೆ, ಎಣ್ಣೆಅಣಬೆ ಎಳನೀರು. ಚಿಕ್ಕ ಮಕ್ಕಳಿಂದ ಮುದುಕರಿಗೂ ಇಷ್ಟವಾಗುವ ಮತ್ತು ಆರೋಗ್ಯಕ್ಕೂ ಅತ್ಯುತ್ತಮವಾದ ಎಳನೀರು ಹೇಗೋ ಎಣ್ಣೆಅಣಬೆಯೂ ಹಾಗೆ. ಹೆಗ್ಗಾಲಣಬೆ ನೀರಿನಂತೆ ರುಚಿ ಇಲ್ಲವೇ ಇಲ್ಲ ಎನ್ನುವಂತಿಲ್ಲ, ಆದರೆ ಎಣ್ಣೆಅಣಬೆಯನ್ನು ಮೀರಿಸುವುದಿಲ್ಲ.

ವಿರಳವಾದ ಎಣ್ಣೆಅಣಬೆ: ಹಿಂದೆ ಮಲೆನಾಡಿನಲ್ಲಿ ಅದರಲ್ಲೂ ಶಿವಮೊಗ್ಗ ಸುತ್ತಮುತ್ತ ಹೆಚ್ಚಾಗಿ ಹತ್ತಿ ಬೆಳೆಯುತ್ತಿದ್ದವು. ಹತ್ತಿ ಹೊಲದ ಪಕ್ಕದಲ್ಲಿಯೇ ಮರಗಿಡಗಳಿಂದ ಆವೃತವಾದ ಕಾಡಿತ್ತು. ಮಳೆಗಾಲ ಪ್ರಾರಂಭವಾಗಿ ಒಂದೂವರೆ ತಿಂಗಳಲ್ಲಿ ಅಣಬೆಗಳ ಹಬ್ಬ ಪ್ರಾರಂಭವಾಗುತ್ತದೆ. ಆಗ ಮಳೆ ಬಂದ ದಿನ ಒಮ್ಮೆ ಒಂದು ಹತ್ತಿ ಹೊಲವನ್ನು ಸುತ್ತಿ ಬಂದರೆ ಸಾಕಿತ್ತು. ಸಾಕು ಸಾಕೆನಿಸುವಷ್ಟು ಎಣ್ಣೆಅಣಬೆಗಳು ಚೀಲ ತುಂಬಿರುತ್ತಿದ್ದವು. ತೀರಾ ಹೂಲ ಸುತ್ತುವ ಅವಶ್ಯಕತೆಯೇ ಇರಲಿಲ್ಲ ಸುಮ್ಮನೆ ನಡೆದುಕೊಂಡು ಹೋಗುವಾಗ ದಾರಿ ಪಕ್ಕದಲ್ಲಿಯೇ ಒಂದೆರಡು ಅಣಬೆಗಳು ತಲೆಯೆತ್ತಿ ಸೆಳೆಯುತ್ತಿದ್ದವು. ಮನೆಯ ಹಿತ್ತಲಿನಲ್ಲಿಯೂ ನಳನಳಿಸುತ್ತಿದ್ದವು. ಕೇವಲ ಒಂದೇ ಒಂದು ಸಣ್ಣ ಎಣ್ಣೆಅಣಬೆಯೂ ಈರುಳ್ಳಿಯೊಂದಿಗೆ ಹುರಿದು ಬಾಯಿಗಿಟ್ಟರೆ ಬಾಯಲ್ಲಿ ನೀರೂರಿಸುವಷ್ಟು ರುಚಿ ನೀಡಿ ಮನೆಯೆಲ್ಲ ಘಂಗುಡಿಸುತ್ತಿತ್ತು. ಅಂದು ಮಲೆನಾಡಿನ ಹಾದಿ ಬೀದಿಯಲ್ಲೆಲ್ಲಾ ಹುಟ್ಟಿಕೊಳ್ಳುತ್ತಿದ್ದ ಎಣ್ಣೆಅಣಬೆಗಳು ಇಂದು ಐದೆರೆ ಶುಂಠಿ ಹೊಲ, ಹತ್ತೆಕರೆ ಅಡಿಕೆ ತೋಟ ಸುತ್ತಿದರೂ ಒಂದೇ ಒಂದು ಕಾಣಿಸುವುದೂ ಕಷ್ಟವಾಗಿದೆ. ■

ಜೀವಸತ್ವಗಳ ಆಗರ ಅಣಬೆ

ಅಣಬೆಗಳು ಹದಗೆಡುತ್ತಿರುವ ಹೃದಯದ ಆರೋಗ್ಯವನ್ನು ಹದ್ದುಬಸ್ತಿನಲ್ಲಿಡುತ್ತವೆ. ಜೀವಸತ್ವಗಳ ಆಗರವಾಗಿರುವ ಇವು ದೇಹದ ಸಕ್ಕರೆ ಮಟ್ಟ ನಿಯಂತ್ರಿಸುತ್ತವೆ. ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತವೆ ಎನ್ನುತ್ತಾರೆ ತಜ್ಞರು. ಇಂತಹ ಅಣಬೆಗಳು ನಮ್ಮೆಲ್ಲರ ಆಹಾರದ ಮುಖ್ಯವಸ್ತುವಾಗಲಿ. ನೈಸರ್ಗಿಕವಾಗಿ ಬೆಳೆಯುವ ಅದ್ಭುತ ರುಚಿಯ ಎಣ್ಣೆಅಣಬೆ ಹೆಚ್ಚಾಗಲಿ. ಎಣ್ಣೆಅಣಬೆ ನಶಿಸಲು ನಿಖರ ಕಾರಣ ಕಂಡುಹಿಡಿದು, ಪರಿಹಾರ ಸಿಗುವಂತಾಗಲಿ ಎಂಬುದು ಎಲ್ಲರ ಆಶಯವಾಗಿದೆ.

V-karantaka
Pg 13

V-karantaka
Pg 09

ರೈತರು ಉದ್ಯಮಿಗಳಾಗಲಿ: ಶಾಲಿನಿ ರಜನೀಶ್

ನಬಾರ್ಡ್‌ನ 44ನೇ ಸಂಸ್ಥಾಪನಾ ದಿನದ ಕಾರ್ಯಕ್ರಮ ಉದ್ಘಾಟನೆ

■ **ವಿಕ ಸುದ್ದಿಲೋಕ** ಬೆಂಗಳೂರು



"ರಾಜ್ಯದ ರೈತರು ನಬಾರ್ಡ್‌ನ ವಿವಿಧ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಉದ್ಯಮಿಗಳಾಗಿ ಹೊರಹೊಮ್ಮಬೇಕು," ಎಂದು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಕರೆ ನೀಡಿದರು.

ನಗರದ ನಬಾರ್ಡ್ ಪ್ರಾದೇಶಿಕ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್)ನ 44ನೇ ಸಂಸ್ಥಾಪನಾ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

"ಕೃಷಿ ವಲಯದಲ್ಲಿ ಆರ್ಥಿಕ ಪ್ರಗತಿಗೆ ಮೌಲ್ಯವರ್ಧನೆ ಬಹಳ ಮುಖ್ಯ. ಕೃಷಿ, ತೋಟಗಾರಿಕೆಯ ಉತ್ಪನ್ನಗಳನ್ನು ಸಂಸ್ಕರಿಸಿ, ಪ್ಯಾಕ್ ಮಾಡಿ ಅಥವಾ ಬೇರೆ ರೀತಿಯಲ್ಲಿ ಮಾರ್ಪಡಿಸಿ ಅವುಗಳ ಮೌಲ್ಯವನ್ನು ಹೆಚ್ಚಿಸಬೇಕು. ಸಾಮಾನ್ಯವಾಗಿ ಕಚ್ಚಾ ಉತ್ಪನ್ನಗಳಿಗಿಂತ ಮೌಲ್ಯವರ್ಧಿತ ಉತ್ಪನ್ನಗಳು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತವೆ. ಇದರಿಂದ ರೈತರ ಆದಾಯ ಹೆಚ್ಚುತ್ತದೆ. ಅಲ್ಲದೆ, ಸಂಸ್ಕರಣಾ ಉದ್ಯಮಗಳು ಬೆಳೆದು ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಹೀಗೆ, ರೈತರು ವರ್ಷಪೂರ್ತಿ ಕೆಲಸ ಮಾಡಿ, ಆದಾಯ ಗಳಿಸುವ ಮಾರ್ಗ ಕಂಡುಕೊಳ್ಳಬೇಕು. ಮೌಲ್ಯಾಧಾರಿತ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡಿದರೆ, ಐದೇ ವರ್ಷದಲ್ಲಿ ಕ್ರಾಂತಿಕಾರಿ ಬದಲಾವಣೆ ಕಾಣಬಹುದು," ಎಂದು ಹೇಳಿದರು.

ನಬಾರ್ಡ್ ಕರ್ನಾಟಕ ಪ್ರಾದೇಶಿಕ ಕಚೇರಿಯ ಮುಖ್ಯ ಪ್ರಧಾನ ವ್ಯವಸ್ಥಾಪಕ ಡಾ. ಸುರೇಂದ್ರ ಬಾಬು ಮಾತನಾಡಿ, "2024-25ರ ಹಣಕಾಸು ವರ್ಷದಲ್ಲಿ ಕರ್ನಾಟಕ ಪ್ರಾದೇಶಿಕ ಕಚೇರಿಯು ನಬಾರ್ಡ್ ಗಣನೀಯ ಸಾಧನೆ ಮಾಡಿದೆ. ವ್ಯವಹಾರ ಕಾರ್ಯಾಚರಣೆಯಲ್ಲಿ ಕರ್ನಾಟಕ ರಾಜ್ಯ 27,846 ಕೋಟಿ ರೂ.ಗಳ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಇದರಲ್ಲಿ ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಸ್ಥೆಗಳಿಗೆ 21,442 ಕೋಟಿ ರೂ. ಪುನರ್ಧನ ನೆರವು, ಮೂಲಸೌಕರ್ಯಕ್ಕಾಗಿ ರಾಜ್ಯ ಸರಕಾರಕ್ಕೆ 4,974 ಕೋಟಿ ರೂ. ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಿಗೆ 1,431 ಕೋಟಿ ರೂ.ಗಳ ನೇರ ಪುನರ್ಧನ ಸೇರಿದೆ," ಎಂದರು.

ಸಾಧನೆ ಮಾಡಿದ ರೈತ ಉತ್ಪಾದಕ ಸಂಸ್ಥೆಗಳನ್ನು ಸನ್ಮಾನಿಸಲಾಯಿತು. ನಬಾರ್ಡ್ ಜನರಲ್ ಮ್ಯಾನೇಜರ್ ಅಶುತೋಷ್ ಕುಮಾರ್, ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ನಿರ್ದೇಶಕ ಸೊನಾಲಿ ಸೇನ್ ಗುಪ್ತಾ, ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಭವೇಂದ್ರ ಕುಮಾರ್ ಹಾಗೂ ನಬಾರ್ಡ್‌ನ ಹಿರಿಯ, ಕಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.